ಮಾರಾಟ ಮಾಡಿದ್ದಾನೆ. ಗಂಡನಿಗೆ ಮನೆ ಎಂಬುದೇ ಇಲ್ಲ. ಬಾಹ್ಯ ರೂಪವಷ್ಟೇ ಸಂಸಾರ ಸಾಗಿಸಲು ಸಾಕಾ?

ಇವಳು ಅಮ್ಮನಿಗೆ ಉತ್ತರಿಸಿದ್ದಳು. 'ನೀನು ಬೇರೆ ಧರ್ಮದವರನ್ನು ಆಗಿ ಚೆನ್ನಾಗಿಯೇ ಇದ್ದೀಯಲ್ಲಮ್ಮಾ? ಆಗೇನು ಅಪ್ಪನಿಗೆ ಆಸ್ತಿ ಇತ್ತೇ? ಮನೆ ಇತ್ತೇ?. ನಿನಗೇನು ತೊಂದರೆಯಾಗಿದೆ?' ಟೀಚರು ನೆನಪಿಸಿಕೊಂಡರು. ಮಗಳು ಹೇಳಿದ್ದರಲ್ಲಿ ಪೂರ್ಣ ಸತ್ಯವಿರಲಿಲ್ಲ. ತಾನು ಇವರನ್ನು ಮದುವೆಯಾಗುವ ಮೊದಲು ಸ್ವಂತ ಮನೆ ಇರಬೇಕು ಎಂದು ಕಂಡೀಶನ್ನು ಹಾಕಿದ್ದೆ. ಇವರು ಅದು ಹೇಗೋ ಸಾಲ ಸೋಲ ಮಾಡಿ ಮಣ್ಣಿನ ಗೋಡೆಯ, ಮುಳಿ ಹುಲ್ಲು ಮಾಡಿನ ಮನೆ ಕೊಂಡಿದ್ದರು. ಮನೆಯ ನೆಲಕ್ಕೆ ತನಗೆ ಗೊತ್ತಿಲ್ಲದಿದ್ದರೂ ತಾನು ಸೆಗಣಿ ಸಾರಿಸಬೇಕಿತ್ತು. ಟಾಯಿಲೆಟ್ಟಿಗೆ ಗೋಣಿ ತಾಟೇ ಬಾಗಿಲು. ಬಾವಿಯಿಂದ ನೀರು ಎಳೆದು ತರುವುದು ಒಂದು ಸಾಹಸ. ಚಿಮಣಿ ದೀಪದಲ್ಲಿ ರಾತ್ರಿ ಕಳೆಯಬೇಕು. ಸುತ್ತೆಲ್ಲಾ ಹಾವು, ಚೇಳುಗಳು. ಆ ಮಳೆಗಾಲದಲ್ಲಿ ಗಾಳಿಗೆ ಮಾಡಿನ ಮುಳಿ ಹುಲ್ಲು ಹಾರಿಹೋಗಿ ಮನೆಯಿಡೀ ಕೆರೆ. ಎರಡು ರಾತ್ರಿ ನಿದ್ರೆ ಮಾಡಲು ಜಾಗವಿರಲಿಲ್ಲ. ಅಂತಹ ಮನೆಯಲ್ಲಿ ಇವರ ಮಾವನ ಮಕ್ಕಳು ಇಬ್ಬರು. ಜೊತೆಗೆ ಇವರ ತಂದೆ. ತನಗೆ ಆಗ ಮೀನು ಬಿಟ್ಟರೆ ತರಕಾರಿ ಅಡುಗೆ ಮಾಡಲು ಬರುತ್ತಿರಲಿಲ್ಲ. ರಾಯರು ಮೀನು ಮಾಂಸ ತಿನ್ನುತ್ತಿರಲಿಲ್ಲ. ಆದರೂ ಸಂಸಾರ ಸಾಗಿತು. ಕೊನೆಗೆ ಇವರು ಮತ್ತೆ ಸಾಲ–ಸೋಲ ಮಾಡಿ ಮರದ ಮಾಡು ಮಾಡಿ ಹೆಂಚು ಹೊದಿಸಿದರು. ಮನೆಗೊಂದು ಅಟ್ಟವಿರಲಿಲ್ಲ. ಮನೆ ನೋಡ ಬರುವ ಸ್ನೇಹಿತರು ಅಟ್ಟ ಇಲ್ಲದವನಿಗೆ ಹೆಂಡತಿ ಏಕೆ? ಎಂದು ಹಳೆ ಗಾದೆಯನ್ನು ಹೇಳಿ ಜೋಕು ಮಾಡುತ್ತಿದ್ದರು. ಆಗೆಲ್ಲಾ ತನಗೆ ವಿಪರೀತ ನೋವಾಗುತ್ತಿತ್ತು. ರಾಯರ ಸಂಬಳದಲ್ಲಿ ಐದು ಹೊಟ್ಟೆಗಳನ್ನು ತುಂಬಿಸುವುದೇ ಸಮಸ್ಯೆಯಾಗಿತ್ತು.

ಆಗೆಲ್ಲಾ ಟೀಚರಿಗೆ ತಾನು ತಪ್ಪು ಮಾಡಿದೆನೇ ಎಂದು ಅನಿಸುತ್ತಿತ್ತು. ಟೀಚರು ಸುಂದರಿಯಾಗಿದ್ದರು. ಚರ್ಚಿನಲ್ಲಿ ಅವರು ಕೊಯರ್ ಗ್ರೂಪಿನ ಮುಖ್ಯಸ್ಥೆಯಾಗಿದ್ದರು. ಭಕ್ತರು ಹಾಡಿಗಿಂತ ಹೆಚ್ಚಾಗಿ ಅವರನ್ನು ಮೆಚ್ಚಿಕೊಳ್ಳುತ್ತಿದ್ದರು! ಮದುವೆಗೆ ಮೊದಲು ಟೀಚರ ಪ್ರೀತಿಯ ಆಳ ಕಂಡು ಅಮ್ಮ 'ನಿನಗೆ ಆ ಪುಳಿಚಾರ್‌ನ ಜೊತೆ ಸಂಸಾರ ಮಾಡಲು ಸಾಧ್ಯವೇ ಇಲ್ಲ. ಹಟ ಮಾಡಬೇಡ' ಎಂದಿದ್ದರು. ರಾಯರ ಮೇಲಿನ ಟೀಚರ ಪ್ರೀತಿ ಇನಿತೂ ಕಡಿಮೆಯಾಗಿರಲಿಲ್ಲ. ಮದುವೆಯಾದ ಮೇಲೆ ಟೀಚರು ಮೀನು ಮಾಂಸ ಬಿಡಲಿಲ್ಲ. ರಾಯರು ಮೀನು ಮಾಂಸದಿಂದ ದೂರವೇ ಇದ್ದರು. 'ನಿನ್ನನ್ನು ಚರ್ಚಿನವರೆಗೆ ಕರೆದೊಯ್ಯುತ್ತೇನೆ. ಒಳಗೆ ಒಂದು ಮೊಣಕಾಲು ಊರಲಾರೆ' ಎಂದಿದ್ದರು. ಟೀಚರು ಚರ್ಚಿಗೆ ಹೋಗಲಿಲ್ಲ. ಏನಾದರೂ ಕಾರ್ಯಕ್ರಮಕ್ಕೆ ದೇವಾಲಯಕ್ಕೆ ಹೋದರೆ ಪ್ರಸಾದ ತೆಗೆದುಕೊಂಡು ಹಣೆಗೆ ಹಚ್ಚುತ್ತಿದ್ದರು.

'ಟೀಚರನ್ನು ನಮ್ಮ ಧರ್ಮಕ್ಕೆ ಸೇರಿಸಿಬಿಡಿ' ಎಂದು ಪರಿಷತ್ತಿನವರು ರಾಯರನ್ನು ಒತ್ತಾಯಿಸಿದ್ದರು. 'ರಾಯರು ನಮ್ಮ ಧರ್ಮಕ್ಕೆ ಬಂದರೆ ನನ್ನ ಅರ್ಧ ಎಸ್ಟೇಟು ಕೊಟ್ಟು ಬಿಡುತ್ತೇನೆ' ಎಂದು ಟೀಚರ ಸೋದರ ಮಾವ ಆಫರ್ ನೀಡಿದ್ದರು. ರಾಯರು ಮತ್ತು ಟೀಚರು ಧರ್ಮಾಂತರ ಮಾಡಲಿಲ್ಲ. ಮನುಷ್ಯರಾಗಿ ಬದುಕಿದರು. ಈಗ ಮಗಳು ತನ್ನ ವರನನ್ನು ತಾನೇ ಆಯ್ಕೆ ಮಾಡಿದ್ದಾಳೆ. ಆದರೆ ತಂದೆ ತಾಯಿಗೆ ಅದೇ ದೊಡ್ಡ ಆತಂಕ!

ಮದುವೆಯಾಗುವ ಹೆಣ್ಣು ಗಂಡಿನ ಆರ್ಥಿಕ ಸ್ಥಿತಿಯನ್ನು ನೋಡಿ ತೀರ್ಮಾನ ಕೈಗೊಳ್ಳುತ್ತಾಳೆ ಎಂದು ಟೀಚರು ಭಾವಿಸಿದ್ದರು. ತಾನು ಮದುವೆಯಾಗುವ ಗಂಡನಿಗೆ ಒಂದು ಪರಮನೆಂಟು ಕೆಲಸವಿತ್ತು. ಆ ಕೆಲಸದಿಂದ ರಿಟಾರ್ಡ್ ಆದರೂ ಅದಕ್ಕೆ ಪೆನ್‌ಶನ್ನೂ ಬರಲಿತ್ತು. ಸದಾ ಬತ್ತದ ಆರ್ಥಿಕ ಮೂಲ ಪುಟ್ಟ ಸಂಸಾರಕ್ಕೆ ಸಾಕು ಎಂದು ಟೀಚರು ಅಂದುಕೊಂಡಿದ್ದರು. ರಾಯರಿಗೆ ತನ್ನ ಮದುವೆ ವಿಭಿನ್ನವಾಗಿರಬೇಕು ಎಂಬ ಹಂಬಲ. ಅವರ ಮದುವೆಗೆ ಕುತೂಹಲದಿಂದಲೇ ಎರಡು ಸಾವಿರ ಮಂದಿ ಸೇರಿದ್ದರು. ರಾಯರ ಉದ್ಯೋಗದಾತ ತಾನೇ ಪುರೋಹಿತನಾಗಿ ಮದುವೆ ನಡೆಸಿಕೊಟ್ಟಿದ್ದರು. ಟೀಚರ ಖಾಸಾ ಚಿಕ್ಕಪ್ಪ ದೊಡ್ಡ ಪಾದರಿಯಾಗಿದ್ದವರಿಗೆ ಈ ಮದುವೆ ಸುತರಾಂ ಇಷ್ಟವಿರಲಿಲ್ಲ. 'ನಿನಗೆ ಉದ್ದನೆ ನಾಮ ಹಾಕಿಸಿ ಭಜನೆ ಹಾಡಿಸುತ್ತಾರೆ. ನೋಡ್ತೀರು' ಎಂದು ಟೀಚರಲ್ಲಿ ಹೇಳುತ್ತಿದ್ದರು. ರಾಯರು ಹಾಗೆ ಮಾಡಿಸಲಿಲ್ಲ. ತಾವೂ ಮಾಡಲಿಲ್ಲ. ಟೀಚರನ್ನು ಸ್ವಯಂ ಬಿಷಪ್ಪರ ತಮ್ಮನ ಮಗನೇ ಮೆಚ್ಚಿ ಮದುವೆಯಾಗಬಂದಿದ್ದ. ಟೀಚರು ರಾಯರನ್ನೇ ಆಯ್ದುಕೊಂಡರು. ಆಗೆಲ್ಲಾ ಆಗದ ಆತಂಕ ಈಗೇಕಾಗುತ್ತಿದೆ?

ಆ ಕಾಲದಂತಿಲ್ಲ ಈ ಕಾಲ. ಆಗ ಆಸೆಗಳು ಕಡಿಮೆ ಇದ್ದವು. ಈಗ ಹಾಗಲ್ಲ. ಆಗಾಗ ಬದಲಿಸಬೇಕಾದ ಟಚಿಂಗ್ ಸ್ಕ್ರೀನಿನ ಮೊಬೈಲು, ಐದು ವರ್ಷಕ್ಕೊಮ್ಮೆ ಬದಲಿಸಬೇಕಾದ ಕಾರು, ಎರಡೇ ವರ್ಷಗಳಲ್ಲಿ ಕೈ ಕೊಡುವ ಇನ್‌ವರ್ಟರ್, ಫ್ರಿಜ್ಜು, ಕಂಪ್ಯೂಟರ್, ಮೂರು ವರ್ಷಗಳಿಗೊಮ್ಮೆ ಬದಲಾಯಿಸುವ ಸ್ಕೂಟಿ, ಆಗಾಗ ಮನೆಗೆ ಕೊಡಬೇಕಿದ್ದ ಸುಣ್ಣ–ಬಣ್ಣ, ಪದೇ ಪದೇ ರಿಪೇರಿ ಕಾಣುವ ನೀರೆತ್ತುವ ಪಂಪು, ಲಕ್ಷ ಕೊಟ್ಟರೂ ಸಿಗದ ಎಲ್ಕೇಜಿ ಸೀಟು — ಒಂದೇ ಎರಡೇ. ಇವಳು ಹದಿನೇಳು ಸಾವಿರದ ಕೆಲಸದಲ್ಲಿದ್ದಾಳೆ. ಅವನಿಗೆ ಇಪ್ಪತ್ತು ಬರುತ್ತಿದೆ. ಮೂವತ್ತೇಳರಲ್ಲಿ ಇದೆಲ್ಲಾ ಸಾಧ್ಯನಾ? ರಾಯರಿಗೇನೋ ಪೆನ್ಷನ್ನಿದೆ. ಜೀವನ ಮಾಡಿ ಇಡೀ ಮೂರು ಕಾಸಿಗೆ ದುಡಿದ ತಾನು ರಾಯರಿಗಾಗಿ ವಾಲಂಟರಿ ರಿಟೈರುಮೆಂಟು ತೆಗೆದಾಯಿತು. ಹಾಗೆ ಬಿಡುವಾಗ ಕೈಗೇನಾದರೂ ಸಿಕ್ಕಿತಾ? ಅದೂ ಇಲ್ಲ. ಈಗ ರಾಯರಿಗೇ ತಿಂಗಳಿಗೆ ಔಷಧಿಗೆ ಹತ್ತು ದಾಟುತ್ತದೆ. ತನಗೂ ಅರುವತ್ತರ ಸನಿಹವಾಯಿತು. ಯುಟರಸ್ ತೆಗೆದು ಹಾಕಿದ ದುರ್ಬಲ ದೇಹಕ್ಕೆ ಅದ್ಯಾವಾಗ ಅದೇನಾಗುತ್ತದೆಯೋ? ಶುಗರ್, ಬೀಪಿ,

ಕೊಲೆಸ್ಟ್ರಾಲ್ ಯಾವಾಗ ಬರುತ್ತೋ? ಮದುವೆಯಾಗಿ ಒಂದೆರಡು ವರ್ಷಗಳಲ್ಲಿ ಇವಳಿಗೆ ಮಗುವಾಗುತ್ತದೆ. ಹೆರಿಗೆ ಎಂದರೆ ಅದು ಸಿಜೇರಿಯನ್ನೇ! ಅದಕ್ಕೆಷ್ಟು ಕೇಳ್ತಾರೋ? ಮಗುವಿನ ಪಾಲನೆ ಪೋಷಣೆಗೆ ಅಪ್ಪನ–ಅಮ್ಮನ ಸಂಬಳ ಸಾಕಾಗುತ್ತಾ? ಆಗ ರಾಯರ ಪೆನ್ಷನ್ನಿಂದಲೇ ನಿಭಾಯಿಸಬೇಕಾಗುತ್ತದೆ. ರಾಯರು ಇರುವವರೆಗೆ ರಥ ಸಾಗುತ್ತದೆ. ಮುಂದೇನು? ಇವಳು ಮತ್ತು ಇವಳ ಗಂಡನಿಗೆ ಪರ್ಮನೆಂಟು ಕೆಲಸ ಸಿಗದಿದ್ದರೆ ಭದ್ರತೆ ಎಲ್ಲಿದೆ? ಇವಳಿಗೆ ಯಾಕೆ ಇದೆಲ್ಲಾ ಅರ್ಥವಾಗುವುದಿಲ್ಲ?

'ನನಗೆ ನಿನ್ನ ನೋವು ಅರ್ಥ ಆಗುವುದಿಲ್ಲವೆಂದಲ್ಲಮ್ಮ. ಎಲ್ಲದಕ್ಕಿಂತ ಮಿಗಿಲಾದ ಶಕ್ತಿ ಇರೋದು ಪ್ರೀತಿಗೆ. ಅದಲ್ಲದಿದ್ದರೆ ನೀನು ಅಪ್ಪನನ್ನು ಮಾದುವೆಯಾಗಲಿಕ್ಕಿತ್ತಾ? ನಿನ್ನ ಮದುವೆ ಕಾಲದಲ್ಲಿ ಅಜ್ಜಿ ಎಷ್ಟು ನೋವು ಅನುಭವಿಸಿದ್ದರೋ ಏನೋ? ನೀನು ಅದಕ್ಕೆಲ್ಲಾ ಸೊಪ್ಪು ಹಾಕಿದ್ದೀಯಾ? ಈಗ ನೋಡು ನೀವು ಹೇಗಿದ್ದೀರಿ? ನಾವು ಹಾಗೆ ಆಗ್ತೀವಮ್ಮಾ. ಪ್ರೀತಿಗೆ ಬೆಲೆ ಕೊಡು. ನಾವು ಚೆನ್ನಾಗಿ ಬಾಳಿ ತೋರಿಸುವುದಕ್ಕೆ ಅವಕಾಶ ಕೊಡು'.

ರಾಯರಿಗೆ ತನ್ನ ಕೆಲವು ಕಲೀಗ್ಸ್ ನೆನಪಾದರು. ಅವರೆಲ್ಲಾ ಶಾಸ್ತ್ರೋಕ್ತವಾಗಿ ಮದುವೆಯಾದವರೇ. ಅವರ ಮಕ್ಕಳು ಅಮೇರಿಕಾದಲ್ಲಿದ್ದಾರೆ. ರಿಟೈರಾದ ಕಲೀಗ್ಸು ಅಮೇರಿಕಾದಲ್ಲಿದ್ದು ಮಕ್ಕಳಲ್ಲಿಗೆ ಹಾಗೆ, ನೆರೆಮನೆಗೆ ಹೋಗಿ ಬರುವ ಹಾಗೆ, ಹಾರಿ ಹೋಗಿ ಬರುತ್ತಿದ್ದಾರೆ. ಅರುವತ್ತು ಎಂದೋ ದಾಟಿದ್ದರೂ ಶಾರ್ಟ್ಸ್, ಟಿ ಶರ್ಟುಗಳಲ್ಲಿ ಮಿಂಚುತ್ತಿದ್ದಾರೆ. ಅವರ ಹೆಂಡತಿಯರು ಉದ್ದ ಕೂದಲಿಗೆ ಕತ್ತರಿ ಇಟ್ಟು ಬಾಬ್ ಕಟ್ ಮಾಡಿಸಿಕೊಂಡಿದ್ದಾರೆ. ಜೀನ್ಸ್ ಹಾಕಿ ಮೆರೆಯುತ್ತಾ ಆ ಫೋಟೋಗಳನ್ನು ತನ್ನ ವಾಟ್ಸಾಪ್‌ಗೆ ಕಳಿಸುತ್ತಿದ್ದಾರೆ. ಇಂಗ್ಲೀಷ್ ಲಿಟರೇಚರ್ ಓದಿದ ಮಗಳು ರಿಸರ್ಚ್ ಮಾಡಿ ದೊಡ್ಡ ಹೆಸರು ಮಾಡುತ್ತಾಳೆ. ತನ್ನ ಎಲ್ಲಾ ಕೃತಿಗಳನ್ನು ಇಂಗ್ಲೀಷಿಗೆ ಅನುವಾದ ಮಾಡ್ತಾಳೆ. ಅವಳ ಹಾಗೆ ಲಿಟರೇಚರ್‌ನಲ್ಲಿ ಇಂಟರೆಸ್ಟ್ ಇರೋನನ್ನೇ ಮದುವೆ ಆಗ್ತಾಳೆ. ಹಾರ್ವರ್ಡ್ ಫೆಲೋಶಿಪ್ಪು ಪಡೆದು ಇನ್ನಷ್ಟು ಓದಿ ಮತ್ತೆ ಬರೆಯುತ್ತಾಳೆ ಎಂದುಕೊಂಡಿದ್ದು ಈಗ ಹೀಗಾಗಿದೆ. ಏನು ಮಾಡುವುದು?

ಬೆಳೆದ ಮಗಳನ್ನು ಎದುರು ಕೂರಿಸಿ ಮಾತಾಡಲು ರಾಯರಿಂದ ಆಗುತ್ತಿರಲಿಲ್ಲ. ಹಾಗಂತ ಹೇಳದೆ ಉಳಿಯಲೂ ಆಗುತ್ತಿರಲಿಲ್ಲ. ಕೊನೆಗವರು ಮೀನಮೇಷ ಎಣಿಸಿ ಮಗಳಿಗೆ ಒಂದು ಪತ್ರ ಬರೆದರು. ಇದು ಇವಳಿಗೆ ಅವರು ಬರೆದ ಮೊದಲ ಪತ್ರ. ಅದೇ ಕಡೆಯದೂ ಆಗಿಬಿಡುತ್ತದೇನೋ ಎಂಬ ಭೀತಿ ಅವರನ್ನು ಕಾಡಿತು. ಅದರಲ್ಲಿ ತಮ್ಮ ಹೃದಯವನ್ನೆಲ್ಲಾ ಅವರು ತೋಡಿಕೊಂಡಿದ್ದರು. 'ನೋಡು ತಾಯಿ, ಅವನ ಊರಲ್ಲಿ ಸದಾ ಕಾಲ ಬರ. ನೀನು ನೀರಿಗಾಗಿ ನಾಲ್ಕೈದು ಮೈಲಿ ಕೊಡ ಹೊತ್ತು ಅಲೆಯುವುದನ್ನು ನಾನು ಕಲ್ಪಿಸಿಕೊಳ್ಳಲಾರೆ.